**ಸಾಕ್ಷಿಯನ್ನು ಕರೆಸಿ ದಿನಾಂಕ ದಿ ಃ 22.01.2018 ರಂದು ಪ್ರಮಾಣೀಕರಿಸಲಾಯಿತು.**

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದ ಃ**

ನಾನು ಓದಿಲ್ಲ. ಪ್ರತಿವಾದಿ ನನ್ನ ಅಣ್ಣ. ಸರ್ವೆ ನಂಬರ್ 127 ಒಟ್ಟು 2 ಎಕರೆ 7 ಗುಂಟೆ ಇದ್ದು ಖರಾಬು ಸೇರಿ ಒಟ್ಟು 2 ಎಕರೆ 11 ಗುಂಟೆ ಇರುತ್ತದೆ. ಸರ್ವೆ ನಂಬರ್ 127 ಪೋಡ್ ಆಗಿರುತ್ತದೆ. ಪೋಡ್ ಆಗಿರುವ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೂ ಇಲ್ಲವೂ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿಲ್ಲ. ಓ ಎಸ್ 851/05 ಪ್ರಿಲಿಮಿನರಿ ಡಿಕ್ರಿ ಯಾವಾಗ ಆಯಿತು ಎಂದು ನನಗೆ ನೆನಪಿನಲ್ಲಿ ಇಲ್ಲ. ನನ್ನ ಅಣ್ಣ ಆರ್‌ಎಫ್‌ಎ 1200/10 ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ವಕೀಲರ ಮೂಲಕ ಪ್ರಶ್ನಿಸಿದ್ದೇವೆ ಎಂದರೆ ಸರಿ. ಎಫ್‌ಡಿಪಿ ನಂಬರ್ ನನಗೆ ಹೇಳಲು ಬರುವುದಿಲ್ಲ ಮತ್ತು ಅದನ್ನು ಯಾವಾಗ ಸಲ್ಲಿಸಲಾಗಿದೆ ಎಂದು ನನಗೆ ನೆನಪಿನಲ್ಲಿ ಇಲ್ಲ. ಸದರಿ ಎಫ್‌ಡಿಪಿ ಇತ್ಯರ್ಥವಾಗದೇ ಇದ್ದ ಸಮಯದಲ್ಲಿ ಆರ್‌ಎಫ್‌ಎ ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಆರ್‌ಎಫ್‌ಎ ಇತ್ಯರ್ಥವಾಗದೇ ಇದ್ದ ಸಮಯದಲ್ಲಿ ಎಫ್‌ಡಿಪಿ ನಲ್ಲಿ ಪ್ರೊಸಿಡಿಂಗ್ಸ್ ನಡೆದಿದೆ ಎಂದರೆ ಸರಿಯಲ್ಲ. ಸದರಿ ಎಫ್‌ಡಿಪಿ ವಿರುದ್ಧ ಆರ್‌ಎಫ್‌ಎ ನಂಬರ್ 509/15 ಘನ ಉಚ್ಚ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಮೇಲ್ಮನವಿಯಲ್ಲಿ ವಕೀಲರ ಮುಖಾಂತರ ಪ್ರಶ್ನಿಸಿದ್ದೇವೆ ಎಂದರೆ ಸರಿ. ಈಗಲೂ ಸಹ ಎರಡು

ಮೇಲ್ಮನವಿಗಳು ಇತ್ಯರ್ಥವಾಗಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ಈ ದಾವಾ ಸಲ್ಲಿಸುವ ಸಮಯದಲ್ಲಿ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ ವಿಚಾರ ನನಗೆ ಗೊತ್ತಿತ್ತು. ಈದಾವಾ ಪತ್ರದಲ್ಲಿ ಮತ್ತು ನನ್ನ ಸಾಕ್ಷಿ ವಿಚಾರಣೆಯಲ್ಲಿ ಮೇಲ್ಮನವಿ ಇರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಮೇಲ್ಮನವಿ ಅರ್ಜಿ ಇರುವ ಬಗ್ಗೆ ನನ್ನ ದಾವಾ ಪತ್ರದಲ್ಲಿ ಹಾಗೂ ಸಾಕ್ಷಿ ವಿಚಾರಣೆಯಲ್ಲಿ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ. ಈಗ ಸರ್ವೆ ನಂಬರ್ 127 ರಲ್ಲಿ 10 - 15 ವರ್ಷಗಳ ಹಿಂದಿನಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಹಾಗೂ ಅಲ್ಲಿಯೇ ವಾಸವಾಗಿದ್ದಾರೆ. ನಾನು ಹಾಜರುಪಡಿಸಿರುವ ಆರ್‌ಟಿಸಿಯಲ್ಲಿ ಅಂದರೆ ನಿಪಿ 2 ರಲ್ಲಿ ನನ್ನ ಹೆಸರು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಎಷ್ಟು ವರ್ಷದ ಹಿಂದೆ ನನ್ನ ಭಾಗದ ಸ್ವತ್ತು ಗುರುತಿಸಲ್ಪಟ್ಟಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಕಂದಾಯವನ್ನು ಕಟ್ಟಿದ್ದೇನೆ. ಕಂದಾಯವನ್ನು ಕಟ್ಟಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಸಲ್ಲಿಸಿದ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಯನ್ನು ಓದಿಸಿ ತಿಳಿದುಕೊಂಡಿದ್ದೇನೆ. ನಿಪಿ 2 ರ ದಾಖಲೆಯನ್ನು ಈ ಕೇಸಿಗೋಸ್ಕರ ಸುಳ್ಳು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿಲ್ಲ. ಸರ್ವೆ ನಂಬರ್ 127 ರಲ್ಲಿ ನನ್ನ ಅಣ್ಣ – ತಮ್ಮಂದಿರರಾದ 5 ಜನರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. 7 – 8 ಮನೆಗಳನ್ನು ಬಾಡಿಗೆಗೆ ಕೊಡಲಾಗಿದೆ. ಎರಡು ಅಪಾರ್ಟ್‌ಮೆಂಟ್‌ನ್ನು ಕಟ್ಟಲಾಗಿದೆ. ನನ್ನ ಭಾಗಕ್ಕೆ ಬಂದ ಸ್ವತ್ತು ಖಾಲಿ ಇರುತ್ತದೆ. ಮಲ್ಲರೆಡ್ಡಿ ಎನ್ನುವವರು ಒಂದು ಮಹಡಿಯಲ್ಲಿ ವಾಸವಿದ್ದು ಇನ್ನೊಂದು ಮಹಡಿಯನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಪ್ರಭಾಕರ ರೆಡ್ಡಿಯವರು ಸಹ ಮನೆ ಕಟ್ಟಿಕೊಂಡಿದ್ದಾರೆ.

**ಈ ಹಂತದಲ್ಲಿ ಪಾಟೀಸವಾಲನ್ನು ಮುಂದೂಡಲಾಯಿತು.**

**(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**
**ಓ. ಹೇ. ಮತ್ತು ಸ. ಇ**

**(ನಾಗವೇಣಿ)**
5ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು
ನ್ಯಾಯಾಂಗಣ 13, **ಬೆಂಗಳೂರು ನಗರ.**